ಲಿಖಿತ ಮೂಲಕ ಉತ್ತರಿಸುವ

ಕರ್ನಾಟಕ ವಿಧಾನ ಪರಿಷತ್ತು
ನೂರ ನಲವತ್ತನೆಯ ಅಧಿವೇಶನ
ಗುರುವಾರ, ದಿನಾಂಕ : 12 ನೇ ಮಾರ್ಚ್, 2020

ಕೈಡಲ್ ಗುತ್ತಿಗೆ ನೌಕರರ ಬಗ್ಗೆ

ಶ್ರೀ ಬಸವರಾಜ ಶಿವಲಿಂಗಪ್ಪ ಹೊರಟ್ಟಿ (ಶಿಕ್ಷಕರ ಕ್ಷೇತ್ರ) :-

692 (986) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತಿ (ಇಾಡಿeಜಟ) ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 48 ಗುತ್ತಿಗೆ ನೌಕರರ ಪೈಕಿ ಎಷ್ಟು ಜನರನ್ನು ಖಾಯಂ ಪ್ರಕ್ರಿಯೆಯಿಂದ ಕೈಬಿಡಲಾಯಿತು; ಕೈಬಿಡಲು ಕಾರಣಗಳೇನು; ವಿವರವಾಗಿ ಹೆಸರು ಹುದ್ದೆಯ ಪದನಾಮ, ವಿದ್ಯಾರ್ಹತೆ ಹಾಗೂ ಇವರು ಮಾಸಿಕ ಪಡೆಯುತ್ತಿದ್ದ ವೇತನ ಎಷ್ಟು ಎಂಬ ಬಗ್ಗೆ ಮಾಹಿತಿ ನೀಡುವುದು;

(ಆ) ಖಾಯಂ ಪ್ರಕ್ರಿಯೆಯಿಂದ ಕೈಬಿಟ್ಟ ನೌಕರರನ್ನು ಈ ಮೊದಲು ಖಾಯಂ ಮಾಡಿದ ನೌಕರರಂತೆ ಸರಿಸಮನಾಗಿ (ಔಟಿ Pಚಿಡಿ Wiಣh) ಖಾಯಂ ಮಾಡುವಂತೆ ಮಾನ್ಯ ಉಚ್ಚನ್ಯಾಯಾಲಯವು ಆದೇಶ ಮಾಡಿರುವುದು ನಿಜವೇ;

(ಇ) ಇದರ ಸಂಬಂಧ ಕಾನೂನು ಇಲಾಖೆಯು ಇವರನ್ನು ಅವರಿಗೆ ಸರಿಸಮನಾಗಿ ವಿಲೀನಗೊಳಿಸುವಂತೆ ಅಭಿಪ್ರಾಯ ನೀಡಿದ್ದು ಈ ಅಭಿಪ್ರಾಯಕ್ಕೆ ಮಾನ್ಯ ಸಚಿವರು ಅನುಮೋದನೆ ನೀಡಿದರೂ ಕೂಡಾ ಅಧಿಕಾರಿಗಳು ಇವರನ್ನು ಖಾಯಂ ಮಾಡದಿರಲು ಕಾರಣಗಳೇನು;

(ಈ) ಮಾನ್ಯ ಉಚ್ಚನ್ಯಾಯಾಲಯದ ಆದೇಶವು ಸಂವಿಧಾನದ ವಿಧಿ ಅನ್ವಯ ಇಲಾಖೆಗೆ ಬೈಂಡಿಂಗ್ ಅಲ್ಲವೇ ಹಾಗಾದರೆ ಈ ಆದೇಶವನ್ನು ಏಕೆ ಜಾರಿಗೊಳಿಸಲಿಲ್ಲ; ಮೇಲ್ಮನವಿಯನ್ನು ಹಾಕಲಿಲ್ಲವೇಕೆ;

(ಉ) ಹಾಗಾದರೆ, ಕಳೆದ 12 ವರ್ಷಗಳಿಂದ ಹೋರಾಟ ನಡೆಸುತ್ತಿರುವ ನೊಂದ ಈ ಅಭ್ಯರ್ಥಿಗಳನ್ನು ಸರ್ಕಾರವು ಯಾವ ಕಾಲಮಿತಿಯೊಳಗೆ ಮಾನ್ಯ ಉಚ್ಚನ್ಯಾಯಾಲಯದ ಆದೇಶದಂತೆ (ಇಡಿeಜಟ) ಸಂಸ್ಥೆಯಲ್ಲಿ ಖಾಯಂ ಆಗಿ ವಿಲೀನಗೊಳಿಸಿ ಆದೇಶ ಹೊರಡಿಸಿ ನ್ಯಾಯ ಒದಗಿಸುವುದು ?